## ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ, ಹೊನ್ನಾಳಿ

ಸಿ.ಸಿ.969/2023

ಸಾಕ್ಷಿದಾರರ ಹೇಳಿಕೆಃ

| | | | | |
|---|---|---|---|---|
| ಹೆಸರು | : | ಕೆ. ಮಂಜಪ್ಪ | CW: 4 | PW: 5 |
| ತಂದೆಯ ಹೆಸರು | : | ಕೆಂಚಪ್ಪ | | |
| ವಯಸ್ಸು | : | 47 | | |
| ವೃತ್ತಿ | : | ಹೆಚ್ ಸಿ, ನ್ಯಾಮತಿ ಪೋಲೀಸ್ ಠಾಣೆ | | |
| ವಾಸಸ್ಥಳ | : | ಹೊನ್ನಾಳಿ | | |

ದಿನಾಂಕಃ 31.01.2026 ರಂದು ಸಾಕ್ಷಿಯನ್ನು ಕರೆದು ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯವಿಚಾರಣೆಃ ಮಾನ್ಯ ಸ.ಸ.ಅ.ರವರಿಂದಃ-

ನಾನು 2018 ರಿಂದ ಇಲ್ಲಿಯವರೆಗೆ ನ್ಯಾಮತಿ ಪೊಲೀಸ್ ಠಾಣೆಯಲ್ಲಿ ಹೆಚ್ ಸಿ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 13.07.2023 ರಂದು ಚಾಸಾ 1 ರವರು ಠಾಣಾ ವ್ಯಾಪ್ತಿಯ ಗಸ್ತಿನಲ್ಲಿದ್ದಾಗ ಸಂಜೆ 6.15 ಗಂಟೆ ಸಮಯದಲ್ಲಿ ಹೊಸಜೋಗ ಗ್ರಾಮದ ಚೈತನ್ಯನಾಯ್ಕ ತಂದೆ ಹನುಮಂತನಾಯ್ಕ ಎಂಬುವವರು ತಮ್ಮ ಮನೆಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದ ಮೇರೆಗೆ ಸ್ವಯಂ ದೂರನ್ನು ದಾಖಲಿಸಿ, ನನ್ನ ಮೂಲಕ

ಠಾಣೆಗೆ ಚಾಸಾ 2 ಮತ್ತು 3 ರವರನ್ನು ಪಂಚರಾಗಿ ಬರಮಾಡಿಕೊಂಡು ಅವರಿಗೆ ಪ್ರಕರಣ ಮಾಹಿತಿ ನೀಡಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡು ಅವರಿಗೆ ನೋಟೀಸನ್ನು ಜಾರಿ ಮಾಡಿ ನಂತರ ಅವರನ್ನು ಹೊಸಜೋಗ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದು ಸಂಜೆ 6.45 ರ ಸಮಯದಲ್ಲಿ ಸದರಿ ಗ್ರಾಮಕ್ಕೆ ತಲುಪಿ ಜೀಪನ್ನು ಆರೋಪಿತನ ಮನೆಯಿಂದ ಸ್ವಲ್ಪ ದೂರದಲ್ಲಿ ನಿಲ್ಲಿಸಿ ನಾನು, ಚಾಸಾ 1 ರಿಂದ 3 ಮತ್ತು ನಮ್ಮ ಸಿಬ್ಬಂದಿಯವರು ಆರೋಪಿತನ ಹತ್ತಿರ ಹೋಗುತ್ತಿದ್ದರಿಂದ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಆತನು ತಪ್ಪಿಸಿಕೊಂಡು ಓಡಿಹೋಗಿರುತ್ತಾನೆ . ಸಿಬ್ಬಂದಿಯವರು ಹಿಡಿಯಲು ಪ್ರಯತ್ನ ಪಟ್ಟರೂ ಸಿಕ್ಕಿರುವುದಿಲ್ಲ.

ಸ್ಥಳದಲ್ಲಿ ಪರಿಶೀಲನೆ ಮಾಡಲಾಗಿ 90 ಎಂ ಎಲ್ ನ ಓರಿಜಿನಲ್ ಚಾಯ್ಸ್ ವಿಸ್ಕಿಯ 40 ಮಧ್ಯದ ಪೌಚ್‌ಗಳು ಸಿಕ್ಕಿರುತ್ತವೆ. ಅವುಗಳನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದು ಅಮಾನತ್ತುಪಂಚನಾಮೆ ಜರುಗಿಸಿ ಸದರಿ ಮಧ್ಯದ ಪೌಚ್ ಗಳು ಖಾಕಿ ಬಣ್ಣದ ರಟ್ಟಿನ ಬಾಕ್ಸ್ ನಲ್ಲಿ ಹಾಕಿ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ದಾರದಿಂದ ಹೊಲೆದು ಎನ್.ಎಂ.ಟಿ ಎಂದು ಅರಗು ಸೀಲ್ ಹಾಕಿ ನನ್ನ ಹಾಗೂ ಪಂಚರ ಸಹಿಗಳಿರುವ ಚೀಟಿಯನ್ನು ಅದಕ್ಕೆ ಅಂಟಿಸಿರುತ್ತೇವೆ. ಸದರಿ ಪಂಚನಾಮೆಯನ್ನು ಸಂಜೆ 7.00 ರಿಂದ 8.15 ರವರೆಗೆ ಜರುಗಿಸಿ, ನಂತರ ಸದರಿ ಮಧ್ಯದ ಪೌಚ್ ಗಳನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತೇವೆ. ಈ ಸಂಬಂಧ ನಾನು ಚಾಸಾ 9 ರವರಿಗೆ ಹೇಳಿಕೆ ನೀಡಿರುತ್ತೇನೆ.

ಸಾಕ್ಷಿಯು ನಿಪಿ 2 ಸ್ಥಳ ಪಂಚನಾಮೆಯಲ್ಲಿ ಹಾಗೂ ಅದರಲ್ಲಿನ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸಾಕ್ಷಿಯ ಸಹಿಯನ್ನು ನಿಪಿ 2(ಡಿ) ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದಿರುವ ಮುದ್ದೆ ಮಾಲನ್ನು ನೋಡಿ ಗುರುತಿಸಿರುತ್ತಾರೆ. ಆರೋಪಿಯು ಗೈರು ಹಾಜರಿದ್ದು ಆರೋಪಿಯ ಗುರುತಿಸುವಿಕೆಗೆ ಆರೋಪಿ ಪರ ವಕೀಲರು ತಕರಾರು ಇಲ್ಲ ಎಯಿ ತಿಳಿಸಿರುತ್ತಾರೆ.

ಪಾಟೀ ಸವಾಲುಃ- ಆರೋಪಿ ಪರ ಶ್ರೀ.ಎಸ್ ಎಸ್ ಕೆ ವಕೀಲರಿಂದಃ-

ದಿಃ 13.07.2023 ರಂದು ಚಾಸಾ 1 ರವರು ಠಾಣಾ ವ್ಯಾಪ್ತಿಯ ಗಸ್ತಿನಲ್ಲಿದ್ದಾಗ ಸಂಜೆ 6.15 ಗಂಟೆ ಸಮಯದಲ್ಲಿ ಹೊಸಜೋಗ ಗ್ರಾಮದ ಚೈತನ್ಯನಾಯ್ಕು ತಂದೆ ಹನುಮಂತನಾಯ್ಕು ಎಂಬುವವರು ತಮ್ಮ ಮನೆಯ ಮುಂದೆ ಸಾರ್ವಜನಿಕ ಸ್ಥಳದಲ್ಲಿ ಅಕ್ರಮವಾಗಿ ಮಧ್ಯ ಮಾರಾಟ ಮಾಡುತ್ತಿದ್ದಾರೆ ಎಂಬ ಮಾಹಿತಿ ಬಂದ ಮೇರೆಗೆ ಸ್ವಯಂ ದೂರನ್ನು ದಾಖಲಿಸಿ, ನನ್ನ ಮೂಲಕ ಠಾಣೆಗೆ ಚಾಸಾ 2 ಮತ್ತು 3 ರವರನ್ನು ಪಂಚರಾಗಿ ಬರಮಾಡಿಕೊಂಡು ಅವರಿಗೆ ಪ್ರಕರಣ ಮಾಹಿತಿ ನೀಡಿ ಪಂಚರಾಗಿ ಸಹಕರಿಸುವಂತೆ ಕೋರಿಕೊಂಡು ಅವರಿಗೆ ನೋಟೀಸನ್ನು ಜಾರಿ ಮಾಡಿ ನಂತರ ಅವರನ್ನು ಹೊಸಜೋಗ ಗ್ರಾಮಕ್ಕೆ ಕರೆದುಕೊಂಡು ಹೋಗಿದ್ದು ಸಂಜೆ 6.45 ರ ಸಮಯದಲ್ಲಿ ಸದರಿ ಗ್ರಾಮಕ್ಕೆ ತಲುಪಿ ಜೀಪನ್ನು ಆರೋಪಿತನ ಮನೆಯಿಂದ ಸ್ವಲ್ಪ ದೂರದಲ್ಲಿ ನಿಲ್ಲಿಸಿ ನಾನು, ಚಾಸಾ 1 ರಿಂದ 3 ಮತ್ತು ನಮ್ಮ ಸಿಬ್ಬಂದಿಯವರು ಆರೋಪಿತನ ಹತ್ತಿರ ಹೋಗುತ್ತಿದ್ದರಿಂದ ಸಮವಸ್ತ್ರದಲ್ಲಿದ್ದ ನಮ್ಮನ್ನು ನೋಡಿ ಆತನು ತಪ್ಪಿಸಿಕೊಂಡು ಓಡಿಹೋಗಿರುತ್ತಾನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸಿಬ್ಬಂದಿಯವರು ಹಿಡಿಯಲು ಪ್ರಯತ್ನ ಪಟ್ಟರೂ ಸಿಕ್ಕಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಸ್ಥಳದಲ್ಲಿ ಪರಿಶೀಲನೆ ಮಾಡಲಾಗಿ 90 ಎಂ ಎಲ್ ನ ಓರಿಜಿನಲ್ ಚಾಯ್ಸ್ ವಿಸ್ಕಿಯ 40 ಮಧ್ಯದ ಪೌಚ್‌ಗಳು ಸಿಕ್ಕಿರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಅವುಗಳನ್ನು ಪಂಚರ ಸಮಕ್ಷಮ ವಶಕ್ಕೆ ಪಡೆದು ಅಮಾನತ್ತುಪಂಚನಾಮೆ ಜರುಗಿಸಿ ಸದರಿ ಮಧ್ಯದ ಪೌಚ್ ಗಳು ಖಾಕಿ ಬಣ್ಣದ ರಟ್ಟಿನ ಬಾಕ್ಸ್ ನಲ್ಲಿ ಹಾಕಿ ಬಿಳಿ ಬಟ್ಟೆಯಲ್ಲಿ ಪ್ಯಾಕ್ ಮಾಡಿ ದಾರದಿಂದ ಹೊಲೆದು ಎನ್.ಎಂ.ಟಿ ಎಂದು ಅರಗು ಸೀಲ್ ಹಾಕಿ ನನ್ನ ಹಾಗೂ ಪಂಚರ ಸಹಿಗಳಿರುವ ಚೀಟಿಯನ್ನು ಅದಕ್ಕೆ ಅಂಟಿಸಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಸದರಿ ಪಂಚನಾಮೆಯನ್ನು ಸಂಜೆ 7.00 ರಿಂದ 8.15 ರವರೆಗೆ ಜರುಗಿಸಿ, ನಂತರ ಸದರಿ ಮಧ್ಯದ ಪೌಚ್ ಗಳನ್ನು ಠಾಣೆಗೆ ತೆಗೆದುಕೊಂಡು ಹೋಗಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ಸಂಬಂಧ ನಾನು ಚಾಸಾ 9 ರವರಿಗೆ ಹೇಳಿಕೆ ನೀಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ದಾಳಿಗೆ ಹೋಗಲು ಚಾಸಾ 1 ರವರು ನನಗೆ ಲಿಖಿತ ನೋಟೀಸ್ ನೀಡಿಲ್ಲ ಎಂದರೆ ಸಾಕ್ಷಿಯು ಮೌಖಿಕವಾಗಿ ಹೇಳಿ ಕರೆದುಕೊಂಡು ಹೋಗಿರುತ್ತೇನೆ. ಸಾಮಾನ್ಯವಾಗಿ ಮುದ್ದೆ ಮಾಲು ರೀತಿಯ ಮಧ್ಯದಿ ಪೌಚ್ ಗಳು ಇಲ್ಲಾ ಮಧ್ಯದ ಅಂಗಡಿಗಳಲ್ಲಿ ಸಿಗುತವೆ ಎಂದರೆ ಸರಿ. ಮುದ್ದೆ ಮಾಲಿಗೂ ಆರೋಪಿಗೂ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.